## ಕಂಡಿರಾ ಚಾಕೊಲೇಟ್ ಚಂದಿರನಾ?

ಹುಣ್ಣಿಮೆಯ ದಿನ ಆಗಸದಂಚಿನಲ್ಲಿ ನಿಂತಿರುವ ಸುಂದರ ಚಂದಿರನಿಗೆ ಸೋಲದವರಿಲ್ಲ. ಹಾಗೆಯೇ ಜಾಲಿಗಿಡದ ಬುಡದಲ್ಲಿ ತಣ್ಣಗೆ ಕೂತಿರುವ ಈ ಚಾಕೊಲೇಟ್ ಚಂದಿರನ ಸೊಬಗಿಗೂ ಎಳ್ಳಷ್ಟೂ ಕೊರತೆಯಿಲ್ಲ. ಇಡೀ ಭುವಿಯ ಸಕಲ ಜೀವರಾಶಿಗಳ ಅಸ್ತಿತ್ವದ ಮೇಲೆ ಪ್ರಭಾವ ಬೀರಬಲ್ಲ ಜೇನ್ನೊಣಗಳ ವಿಸರ್ಜಿತ ಮನೆಯಿದು.

ಪರಾಗ, ಜೇನು, ಲಾರ್ವಾಗಳಿಗೆ ವಿವಿಧ ಕೋಣೆಗಳಿರುವ ಈ ಮನೆಯ ಪ್ರತಿ ಕೋಶವೂ ಪರಸ್ಪರ ಸಂಪರ್ಕವಿರುವ ಷಡ್ಭುಜಗಳಿಂದ ಇದು ರೂಪುಗೊಂಡಿದೆ. ಒಂದೆಡೆ ನೆಲೆನಿಲ್ಲದ ಈ ಪಂಖದೇವತೆಗಳು ಒಮ್ಮೆ ವಾಸಿಸಿ ತೊರೆದ ಗೂಡಿಗೆ ಮತ್ತೆ ಮರಳುವುದಿಲ್ಲ. ಎಂಜಿನಿಯರಿಂಗ್ ಓದದ ಈ ವಿದ್ಯಾವಂತರು ವಾತಾವರಣದ ಉಷ್ಣತೆ, ಗಾಳಿ, ಮಳೆ, ಚಳಿ ಮುಂತಾದವುಗಳ ಒತ್ತಡವನ್ನು ಹಾಗೂ ನೈಸರ್ಗಿಕ ಶತ್ರುಗಳ ದಾಳಿಯನ್ನು ಸಮರ್ಥವಾಗಿ ಎದುರಿಸುವಂತಹ ಗೂಡನ್ನು ಕಟ್ಟುತ್ತವೆ. ಸಂಸಾರದ ಗಾತ್ರ ಹೆಚ್ಚಿದಂತೆ ಗೂಡಿನ ಗಾತ್ರವೂ ಹೆಚ್ಚುತ್ತದೆ. ದಿನವೊಂದಕ್ಕೆ ಹಲವು ಕಿ.ಮೀ. ಪ್ರಯಾಣಿಸಿ ನೂರಾರು ಹೂಗಳನ್ನು ಸ್ಪರ್ಶಿಸಿ ಮಕರಂದ ಹೊತ್ತು ತಂದು ಜೋಪಾನವಾಗಿ ಇಡುವ ಈ ಮುಗ್ಧರಿಗೆ ಮನುಷ್ಯನ ದುರಾಸೆಯೇ ಮಹಾನ್ ವೈರಿ. ಹಲವಾರು ದಿನಗಳ ಸತತ ಪರಿಶ್ರಮದಿಂದ ಶೇಖರಿಸಲ್ಪಟ್ಟ ಜೇನಿಗಾಗಿ ಅವುಗಳ ಇಡೀ ಗೂಡನ್ನು ಬೆಂಕಿಹಚ್ಚುವ ಇಲ್ಲವೇ ಕ್ರಿಮಿನಾಶಕಗಳನ್ನು ಸಿಂಪಡಿಸಿ ಕೊಲ್ಲುವ ನಾವುಗಳು ನಿಜವಾಗಿಯೂ ವಿಷಜಂತುಗಳು. ಇದರೊಂದಿಗೆ ನಮ್ಮ ಆಧುನಿಕ ಕೃಷಿ ಪದ್ಧತಿಗಳು, ಅರಣ್ಯ ನಾಶಗಳಿಂದ ಇವುಗಳು ಶಾಶ್ವತವಾಗಿ ಮರೆಯಾಗುತ್ತಿವೆ. ಆದರೆ ಕೇವಲ ತನ್ನಾತ್ಮ ರಕ್ಷಣೆಗೆ ಸಣ್ಣದೊಂದು ಮುಳ್ಳನ್ನು ಹೊಂದಿರುವ ಇವುಗಳನ್ನು ಅವುಗಳ ಕುಟುಕಿನ ಪ್ರಯೋಗಕ್ಕೆ ನಾವು ದೂಷಿಸುವುದು ದುರಂತ. ಈಗೀಗ ಜೇನುಕೃಷಿಯೆಂಬುದು ಉದ್ಯಮವಾಗಿಯೂ ಬೆಳೆದಿದೆ. ಆದರೆ ಜೇನ್ನೊಣಗಳು ತಾವು ತಯಾರಿಸುವ ಜೇನು ಕೇವಲ ಮನುಷ್ಯರಾದ ನಮಗಾಗಿಯೇ ಎಂದು ನಾವಂದುಕೊಂಡಿದ್ದೇವೆ. ಇದು ನಮ್ಮ ಕಡು ಸ್ವಾರ್ಥದ ಪರಮಾವಧಿಯಲ್ಲದೆ ಮತ್ತೇನಲ್ಲ. ಅಂದಹಾಗೆ ಜೇನ್ನೊಣಗಳು ಹೀಗೆ ಬಿಟ್ಟುಹೋದ ಗೂಡು ಇತರ ಜೀವಿಗಳಿಗೆ ಉಪಕಾರಿಯಾಗಿ, ಅಳಿದು ಉಳಿದ ಶೇಷವು ಭೂಮಿಗಿಳಿದು ಸಾವಯವ ಗೊಬ್ಬರವಾಗುತ್ತದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ





## ಟೆಂಪೊ ಮುಂದೆ ಸುಗ್ಗಿ ಕುಣಿತ

ಈಚೆಗೆ, ಚಂದಾವರದಿಂದ ಕುಮಟಾಕ್ಕೆ ಬರುತ್ತಿದ್ದೆ. ಅಲ್ಲಿನ ರಸ್ತೆ ಬದಿಯ ಮನೆಯೊಂದರಲ್ಲಿ ವಿವಿಧ ವೇಷಧಾರಿಗಳು ತಮ್ಮದೇ ಶೈಲಿಯಲ್ಲಿ ಹಾಡುತ್ತಾ, ಕುಣಿಯುತ್ತಿರುವುದನ್ನು ನೋಡಿ, ಕಾರನ್ನು ರೋಡಿನ ಬದಿಗೆ ನಿಲ್ಲಿಸಿ ಅತ್ತ ಸುಳಿದೆ. ಬಳಿಕ ಅದು ಸುಗ್ಗಿ ಕುಣಿತವೆಂದು ತಿಳಿಯಿತು. ಬಹಳ ವರ್ಷದ ನಂತರ ಸುಗ್ಗಿ ಕುಣಿತ ನೋಡುವ ಅವಕಾಶ ಸಿಕ್ಕಿತೆಂದು ಖುಷಿಪಟ್ಟೆ. ಇನ್ನೇನು ಆ ಮನೆಯ ಹತ್ತಿರ ತಲುಪುತ್ತಿರುವಾಗಲೇ ನೃತ್ಯ ಮುಗಿದೇ ಹೋಯಿತು. 'ಛೆ ಸ್ವಲ್ಪದರಲ್ಲೇ ಸುಗ್ಗಿ ಕುಣಿತ ನೋಡುವ ಒಂದೊಳ್ಳೆ ಅವಕಾಶ ತಪ್ಪಿಸಿಕೊಂಡೆನಲ್ಲ' ಎಂದು ಬೇಸರಿಸಿಕೊಂಡು ಮನಸ್ಸಿನಲ್ಲೇ ಗೊಣಗಿದೆ. ಆಗಲೇ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಯೊಬ್ಬ ನೃತ್ಯ ತಂಡದ ಮುಖ್ಯಸ್ಥನ ಜೊತೆ ಮಾತಿಗಿಳಿದ.

'ನನ್ನ ಟೆಂಪೊ ಮುಂದೆ ಒಂದ್ ಬಾರಿ ಕುಣಿಸ್ಬೇಕು ನೋಡು, ಎಷ್ಟು ದುಡ್ಡು ಆಯ್ತದೆ?

'ಏ... ಹಾಂಗೆಲ್ಲಾ ಅವ್ರು ಗಾಡಿ ಮುಂದೆ ಕುಣುದಿಲ್ವಾ'.

'ಎಂತಕ್ ಆಗುದಿಲ್ಲ, ಕಳೆದ ವರ್ಷ ಕುಣ್ದಿರಿ'

ಅವರ ಸಂಭಾಷಣೆ ಕೇಳಿ ಕುಣಿತ ನೋಡುವ ಆಸೆ ಈಡೇರುವ ಲಕ್ಷಣ ಗೋಚರಿಸಿತು. ಅಂತೂ ಆ ವ್ಯಕ್ತಿ ತನ್ನ ಗಾಡಿಯ ಮುಂದೆ ಕುಣಿಸಲು ಮುಖ್ಯಸ್ಥನನ್ನು ಒಪ್ಪಿಸಿದ್ದು, ಅವರು ಕುಣಿಯುವುದು ಖಾತ್ರಿಯಾಗಿ, ನನ್ನ ಬಾಲ್ಯದಲ್ಲಿ ನೋಡಿದ್ದ ಪಾತ್ರಗಳು ಕಣ್ಮುಂದೆ ಕುಣಿಯತೊಡಗಿದವು.

ಸುಗ್ಗಿಹಬ್ಬವು ಕರ್ನಾಟಕದ ಬಹುತೇಕ ಭಾಗಗಳಲ್ಲಿ ಪ್ರತೀ ವರ್ಷದ ಮಾರ್ಚ್ ಅಥವಾ ಏಪ್ರೀಲ್ ತಿಂಗಳಲ್ಲಿ ಆಚರಿಸುವ ಒಂದು ಸಡಗರ. ಆದರೂ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ, ಗೋಕರ್ಣ, ಅಂಕೋಲ ಹಾಗೂ ಕಾರವಾರದಲ್ಲಿಯ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತ ಬಹಳವೇ ವಿಶೇಷ.

ತನ್ನ ಟೆಂಪೊವನ್ನು ಮೈದಾನದ ಕಡೆ ನಿಲ್ಲಿಸಿದ ಆ ವ್ಯಕ್ತಿ, ಅದರ ಮುಂದೆ ಕುಣಿತಕ್ಕೆ ಅಣಿಮಾಡಿಕೊಟ್ಟ. ವಿವಿಧ ಬಗೆಯ ವೇಷಧಾರಿಗಳು ತಲೆಯ ಮೇಲೆ ತುರಾಯಿ ಕಟ್ಟಿದವರು, ಬಣ್ಣ ಬಣ್ಣದ ವೇಷ ಹಾಕಿದವರು, ತಲೆಗೆ ಮುಂಡಾಸ ಕಟ್ಟಿದವರು, ಯಕ್ಷಗಾನ ವೇಷಧಾರಿಗಳು ಹೀಗೆ ಹಲವು ಬಣ್ಣಧಾರಿಗಳು ಸುಗ್ಗಿಯ ಹಾಡನ್ನು ಹಾಡುತ್ತಾ, ಒಂದೇ ವಿಧದಲ್ಲಿ ಹೆಜ್ಜೆ ಹಾಕುತ್ತಾ, ಕೈಯಲ್ಲಿ ಕೋಲುಗಳನ್ನು ಹಿಡಿದು ಹಿಮ್ಮೇಳದ ವಾದ್ಯದ ಗತ್ತಿಗನುಗುಣವಾಗಿ ಕುಣಿಯತೊಡಗಿದರು. ತಾಳ, ಲಯಕ್ಕನುಗುಣವಾಗಿ ಕುಣಿಯುವವರ ಕುಣಿತ ಹಾಗೂ ಅಂಗಾಂಗ ವಿನ್ಯಾಸ ಭಂಗಿಯೂ ಬದಲಾಗುತ್ತದೆ.

ಹೆಮ್ಮೆಯಿಂದ ತನ್ನ ಗಾಡಿಯೆಡೆಗೇ ನೋಡುತ್ತಾ ನಿಂತಿದ್ದ ಆ ಟೆಂಪೊದ ಯಜಮಾನನ ಕಡೆ ಹೋಗಿ ಮೆಲ್ಲನೆ ಕೇಳಿದೆ 'ಎಲ್ಲರೂ ತಮ್ಮ ಮನೆಯ ಅಂಗಳದಲ್ಲಿ, ಅಂಗಡಿಯ ಮುಂಭಾಗದಲ್ಲಿ, ದೇವಾಲಯಗಳಲ್ಲಿ ಕುಣಿಸುವುದನ್ನು ನೋಡಿದ್ದೇನೆ. ಗಾಡಿಯ ಮುಂದೆ ಕುಣಿಸುತ್ತಿರುವುದು ನೋಡಿರುವುದು ಇದೇ ಮೊದಲು. ಏನಿದರ ವಿಶೇಷ' ಅಂದೆ.

ಅವನಿಗೂ ತುಂಬಾ ಹೆಮ್ಮೆ ಅನಿಸಿ, 'ಹೌದು ಸರ್, ಮೊದ್ಲು ಬೇರೊಬ್ರ ಗಾಡಿಗೆ ಡ್ರೈವರ್ ಆಗಿದ್ದೆ. ಎರಡು ವರ್ಷದ ಹಿಂದೆ ಗಾಡಿ ತಕಂಡೆ. ಆಗಿಂದಾ ಪ್ರತೀವರ್ಷ ಗಾಡಿ ಮುಂದೆ ಸುಗ್ಗಿ ಕುಣ್ಸತಿದ್ದೆ, ಹೀಂಗೆ ಮಾಡ್ರೆ ಯಾರ ಕೆಟ್ಟ ಕಣ್ಣೂ ಬೀಳುದಿಲ್ಲ ನೋಡಿ' ಅಂದ. ಅವರ ಕಣ್ಣಲ್ಲಿ ಒಂದು ವರ್ಷದ ಗಾಡಿಯ ಇನ್ಸುರೆನ್ಸ್ ತೆಗೆದುಕೊಂಡಂತಹ ನಂಬಿಕೆಯಿತ್ತು, ತನ್ನ ನಂಬಿಕೆಯಲ್ಲಿ ಬೆಟ್ಟದಷ್ಟು ಭರವಸೆಯಿತ್ತು. ಅವನಿಗೆ ತನ್ನ ಜೀವನಕ್ಕೆ ಸಹಕಾರಿಯಾಗಿರುವ ಗಾಡಿಯ ಮೇಲಿರುವ ಹೆಮ್ಮೆ ಮುಖದಲ್ಲಿ ಎದ್ದು ಕಾಣಿಸುತ್ತಿತ್ತು. ತಮ್ಮ ಚಿಕ್ಕ ಚಿಕ್ಕ ಸಂತೋಷಗಳಲ್ಲೇ ಸಂಭ್ರಮಿಸುವ ಇಂತಹವರೇ ನಿಜವಾದ ಸುಖಿಗಳು ಎಂದುಕೊಳ್ಳುತ್ತಾ ಮನೆಯೆಡೆ ಹೊರಟೆ.

—ಆರ್ಕೆ ಆಡುಕಳ, ಬೆಂಗಳೂರು